

# Loksabha Election 2024

## Dakshina Kannada Loksabha Constituency

NAVAYUGA NAVAPATHA

**Dakshina Kannada – Ocean of Possibilities**, is a land that has always embodied the idea of Vikas Bhi, Virasat Bhi. And as we step into the Amritkaal of Bharat, we look forward to building 'Viksit Dakshina Kannada for Viksit Bharat'.

Under the leadership of our visionary Prime Minister Narendra Modi, here are key areas we would focus on to craft a Dakshina Kannada 2.0 empowered by Modi 3.0.

Together, lets make it happen.

**Captain Brijesh Chowta**
BJP Candidate
Dakshina Kannada Loksabha
Constituency



ಮತ್ತೊಮ್ಮೆ ಮೋದಿ ಸರ್ಕಾರ

## Dakshina Kannada - Ocean of Possibilities

### Infrastructure and Connectivity

- Addressing the connectivity issues between Mangalore and Bangalore which requires a strategic blend of infrastructural enhancements and technological innovations while also keeping the ecological challenges in mind.
- An all-weather connectivity road between Mangalore and Bangalore on the Shiradi Ghat stretch to enable better connectivity, easier travel and greater tourism prospects.
- Explore the possibility of a new line for a high-speed rail link between Mangalore and Bangalore which can significantly reduce travel time well as facilitate cargo movement.

### Industry and Investment

- Transforming our potential into possibility by inviting investment from across sectors assuring them of ease of doing business with good governance.
- Greater boost to the small and medium scale enterprises and setting up clusters especially in the food processing, textile and fisheries & marine products sector with special attention to women and fisherfolk communities as well as exploring possibilities of seaweed cultivation.
- Invite global companies across sectors to base their R&D centres here.

### Start-up and Entrepreneurship

- Facilitate the emergence of a vibrant start-up ecosystem, with co-working spaces, start-up incubators, innovation hubs and accelerators providing crucial support and mentorship to budding entrepreneurs.
- BackToOoru– An initiative to bring back to our hometown, our people who have successfully established businesses across the country in the last few decades. This is aimed at encouraging them to set up businesses here and generate employment opportunities for our rural youth too, here in Dakshina Kannada itself.
- BYOB- Be Your Own Boss - A Mentoring program for aspiring entreprenuers by successful industry leaders who will handhold young minds of our region to turn their ideas into plan of action and mentor them to setup businesses here.
- Initiating efforts for a Film City in Dakshina Kannada; Efforts to promote pursuit of gaming, design, IT, animation, and other creative enterprises with a multifaceted approach that encompasses education, infrastructure, industry collaboration, and policy support.

### Tourism

- Developing basic infrastructure and facilities at all our beaches with special focus on Sasihitlu-opening up avenues for both beach tourism as well as facilitating setup and promotion of adventure sports.
- Make efforts to promote temple tourism, folk & food tourism, ecological tourism that can generate both investment and employment opportunities while preserving the local social and cultural ecosystems.

### Nari Shakti

- Women have been the driving force of our economy especially in sectors like hospitality, textile, food, travel, tourism among others.
- Initiate discussions with notable women entrepreneurs and industry leaders and facilitate greater participation of women in our economic growth plan.
- Ensure efforts for the safety and security of women.

### Culture and Heritage

- Protection and promotion of the diverse cultural heritage of our region.
- Setting up a Tulunadu Heritage Experience Centre; Strive to ensure our Tulu language gets its due recognition and seek to avail an Intangible Cultural Heritage Status for the same.
- A Traditional Medicine Centre named after Deyi Baideti to preserve and promote traditional medicinal knowledge systems of the region.

### Agriculture, Animal Husbandry and Fisheries

- Facilitate sustained financial and technological support to our farmers with special focus on natural farming, protection of indigenous breeds of cattle, as well as efforts to address the issues around key crops like areca among others.
- Efforts for upgradation of the Fisheries College to University status at the earliest to enable greater advancements in the fisheries sector.
- Ensure fishermen of Dakshina Kannada thrive and contribute to the nation's Blue revolution, while addressing the evolving challenges and opportunities facing the fisheries sector, including sustainability, technology adoption, and market integration.

### Youth and Connect

- Ensure skill-based training opportunities are available to our youth increasing their employability.
- Initiate innovative ways to address issues like drug abuse, mental health awareness and overall-wellbeing.
- Strengthen the sports ecosystem with infrastructure, training and support needed to enable our youth to bring our nation global glory in the field of sports.
- A sainik school named after Rani Abakka.
- 'Catch-up with Captain'– a regular open interaction with people across the constituency.

### Coastal Development and Security

- Strengthening our coastline by developing a resilient infrastructure.
- Explore possibilities of waterways between key coastal towns.
- Efforts to have an NIA Centre and Forensic Research centre aimed at dismantling the terror networks and keeping vigil on the rising cases of terror activities on the coast.
- Expedite timely completion of India's first Coast Guard Academy.



NAVAYUGA NAVAPATHA

# ಲೋಕಸಭಾ ಚುನಾವಣೆ 2024

## ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರ

ಸತ್ಯ ಧರ್ಮದ ನೆಲ, ಸಂಸ್ಕೃತಿಯ ನೆಲೆ ತುಳುವನಾಡಿನ 'ಸಾಧ್ಯತೆಗಳ ಸಾಗರ' ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಪ್ರಗತಿ ಹಾಗೂ ಪರಂಪರೆಗೆ ಸದಾ ಸಮಾನ ಆದ್ಯತೆ ನೀಡಿ 'ವಿಕಾಸ್ ಭೀ ವಿರಾಸತ್ ಭೀ' ಎನ್ನುವ ನಮ್ಮ ಪ್ರಧಾನಿ ನರೇಂದ್ರ ಮೋದಿಯವರ ಧ್ಯೇಯವಾಕ್ಯದ ಸಾಕಾರ ರೂಪವಾಗಿದೆ.

ಭಾರತ ಅಮೃತ ಕಾಲಕ್ಕೆ ಪಾದಾರ್ಪಣೆ ಮಾಡುವ ಈ ಸಮಯದಲ್ಲಿ ನಮ್ಮ ದಕ್ಷಿಣ ಕನ್ನಡವನ್ನು ಮೋದಿಯವರ ಅಭಿವೃದ್ಧಿಯ ನೀಲಿನಕ್ಷೆಯ ಅವಿಭಾಜ್ಯ ಅಂಗವಾಗಿಸಬೇಕೆಂಬುದು ನನ್ನ ಮಹತ್ವಾಕಾಂಕ್ಷೆ.

'ವಿಕಸಿತ ಭಾರತಕ್ಕೆ ವಿಕಸಿತ ದಕ್ಷಿಣ ಕನ್ನಡ' ಈ ಪರಿಕಲ್ಪನೆಗೆ ಪೂರಕವಾಗಿ ಈ ಕೆಳಕಂಡ ಕಾರ್ಯಸೂಚಿಯೊಂದಿಗೆ ನಿಮ್ಮೆಲ್ಲರ ಸಲಹೆ ಹಾಗೂ ಸಹಕಾರ ಪಡೆದು ಮುಂಬರುವ ಐದು ವರ್ಷಗಳಲ್ಲಿ 'ಸಂಕಲ್ಪದಿಂದ ಸಿದ್ಧಿ' ಯತ್ತ ನಡೆಯುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

**ಕ್ಯಾಪ್ಟನ್ ಬ್ರಿಜೇಶ್ ಚೌಟ**

ಬಿಜೆಪಿ ಅಭ್ಯರ್ಥಿ, ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರ



### ದಕ್ಷಿಣ ಕನ್ನಡ - ಸಾಧ್ಯತೆಗಳ ಸಾಗರ

#### ಸಂಪರ್ಕ, ಮೂಲಸೌಕರ್ಯ ಅಭಿವೃದ್ಧಿಯಲ್ಲಿ ದಾಪುಗಾಲು

- ಪರಿಸರದ ಸಂರಕ್ಷಣೆ ಗಮನದಲ್ಲಿರಿಸಿಕೊಂಡು ತಾಂತ್ರಿಕ ಪರಿಣಿತಿ ಬಳಸಿ ಮೂಲಸೌಕರ್ಯ ಅಭಿವೃದ್ಧಿಪಡಿಸಿ ಮಂಗಳೂರು ಮತ್ತು ಬೆಂಗಳೂರಿನ ನಡುವಣ ಸಂಪರ್ಕ ಸಮಸ್ಯೆಗಳನ್ನು ಪರಿಹರಿಸುವುದು.
- ಮಂಗಳೂರು-ಬೆಂಗಳೂರು ಉಭಯ ನಗರಗಳ ನಡುವೆ ಸಂಚಾರ ಸುಗಮಗೊಳಿಸಿ ವಾಣಿಜ್ಯೋದ್ಯಮ, ಪ್ರವಾಸೋದ್ಯಮವನ್ನು ಉತ್ತೇಜಿಸುವ ನಿಟ್ಟಿನಲ್ಲಿ ಶಿರಾಡಿಘಾಟ್ ಹೆದ್ದಾರಿ ಮಾರ್ಗದಲ್ಲಿ ಸರ್ವಋತು ರಸ್ತೆ ನಿರ್ಮಾಣಕ್ಕೆ ಆದ್ಯತೆ.
- ಮಂಗಳೂರು-ಬೆಂಗಳೂರು ನಡುವಿನ ಪ್ರಯಾಣದ ಸಮಯವನ್ನು ಕಡಿಮೆ ಮಾಡುವ ಹಾಗೂ ಸರಕು ಸಾಗಣಿಕೆಯನ್ನು ಸುಗಮಗೊಳಿಸಲು ಹೊಸ ಹೈಸ್ಪೀಡ್ ರೈಲು ಸಂಪರ್ಕಕ್ಕಾಗಿ ನೂತನ ಮಾರ್ಗದ ಸಾಧ್ಯತೆಗಳ ಪರಿಶೀಲನೆ.

#### ಕೈಗಾರಿಕೆ ಮತ್ತು ಬಂಡವಾಳ ಆಕರ್ಷಣೆ

- ದಕ್ಷಿಣ ಕನ್ನಡ ಜಿಲ್ಲೆಯ ಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶದಿಂದ ಉತ್ತಮ ಆಡಳಿತ ಹಾಗೂ ಪೂರಕ ವ್ಯವಸ್ಥೆಗಳನ್ನು ಒದಗಿಸಿ ವಿವಿಧ ಕ್ಷೇತ್ರಗಳಲ್ಲಿ ಬಂಡವಾಳ ಹೂಡಿಕೆಗೆ ಉತ್ತೇಜನ.
- ಸೂಕ್ಷ್ಮ ಮತ್ತು ಮಧ್ಯಮ ಉದ್ಯಮಗಳಿಗೆ ಉತ್ತೇಜನ. ಪ್ರಮುಖವಾಗಿ ಆಹಾರ ಸಂಸ್ಕರಣೆ, ಜವಳಿ, ಮೀನುಗಾರಿಕೆ, ಸಮುದ್ರ ಅವಲಂಬಿತ ಉತ್ಪನ್ನಗಳ ವಿಶೇಷ ಕ್ಲಸ್ಟರ್‌ಗಳ ಸ್ಥಾಪನೆ. ಮಹಿಳೆಯರು ಮತ್ತು ಮೀನುಗಾರ ಸಮುದಾಯಗಳಿಗೆ ವಿಶೇಷ ಆದ್ಯತೆ.
- ವಿವಿಧ ಕ್ಷೇತ್ರಗಳ ಸಂಶೋಧನೆ ಹಾಗೂ ಅಭಿವೃದ್ಧಿ ಘಟಕಗಳನ್ನು ದಕ್ಷಿಣ ಕನ್ನಡದಲ್ಲಿ ಸ್ಥಾಪಿಸಲು ಪ್ರಮುಖ ಜಾಗತಿಕ ಕಂಪನಿಗಳಿಗೆ ಆಹ್ವಾನ.

#### ಸ್ಟಾರ್ಟ್ ಅಪ್ ಮತ್ತು ಉದ್ಯಮಶೀಲತೆ

- ಜಿಲ್ಲೆಯಲ್ಲಿ ಉದ್ಯಮಶೀಲತೆಗೆ ಉತ್ತೇಜನ ನೀಡುವ ಸಲುವಾಗಿ ಉದಯೋನ್ಮುಖ ಉದ್ಯಮಿಗಳಿಗೆ ಬೆಂಬಲ ಮತ್ತು ಮಾರ್ಗದರ್ಶನ ಒದಗಿಸಿ ಹೊಸ ಸ್ಟಾರ್ಟ್‌ಅಪ್‌ಗಳ ಸ್ಥಾಪನೆಗೆ ಪೂರಕ ಸೌಲಭ್ಯಗಳೊಂದಿಗೆ ವಾತಾವರಣ ನಿರ್ಮಾಣ.
- #BackToOoru ಕಳೆದ ಕೆಲವು ದಶಕಗಳಲ್ಲಿ ದೇಶದ ವಿವಿಧೆಡೆ ಉದ್ಯಮ ಸ್ಥಾಪಿಸಿ ಯಶಸ್ವಿಯಾಗಿರುವ ದಕ್ಷಿಣ ಕನ್ನಡದವರನ್ನು ಮತ್ತೆ ಊರಿಗೆ ಕರೆತಂದು ಸ್ಥಳೀಯವಾಗಿ ಉದ್ಯಮ ಆರಂಭಿಸಿ ಉದ್ಯೋಗ ಸೃಷ್ಟಿಸಲು ಪ್ರೇರೇಪಣೆ.
- BYOB-Be Your Own Boss ಉದ್ಯಮಶೀಲರಾಗಲು ಉತ್ಸುಕರಾಗಿರುವ ಯುವಮನಸ್ಸುಗಳಿಗೆ ಪ್ರೋತ್ಸಾಹ ನೀಡಲು BYOB ಕಾರ್ಯಕ್ರಮ.
- ಗೇಮಿಂಗ್, ಅನಿಮೇಷನ್, ಡಿಸೈನ್ ಮುಂತಾದ ಸೃಜನಶೀಲ ಕ್ಷೇತ್ರಗಳ ಬೆಳವಣಿಗೆಗೆ ಉತ್ತೇಜನ ನೀಡುವುದು. ಫಿಲ್ಮ್ ಸಿಟಿ ನಿರ್ಮಾಣ.

#### ಪ್ರವಾಸೋದ್ಯಮ

- ಸಾಹಸ ಕ್ರೀಡೆಗಳಿಗೆ ಪೂರಕವಾದ ಸಸಿಹಿತ್ಲು ಬೀಚ್‌ನ ಅಭಿವೃದ್ಧಿಗೆ ಒತ್ತು, ಪ್ರವಾಸೋದ್ಯಮದ ಪ್ರಗತಿಗೆ ಕಡಲತೀರದ ಮೂಲಸೌಕರ್ಯಕ್ಕೆ ಆದ್ಯತೆ.
- ದೇಗುಲ ಪ್ರವಾಸೋದ್ಯಮ, ಜಾನಪದ ಮತ್ತು ಆಹಾರ ಪ್ರವಾಸೋದ್ಯಮ, ಪರಿಸರ ಪ್ರವಾಸೋದ್ಯಮದ ಉತ್ತೇಜನಕ್ಕೆ ಆದ್ಯತೆ.

#### ನಾರೀ ಶಕ್ತಿ

- ನಮ್ಮ ಜಿಲ್ಲೆಯ ಮಹಿಳೆಯರು ಆತಿಥ್ಯ, ಜವಳಿ, ಆಹಾರ, ಪ್ರವಾಸ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯವಾಗಿ ಕೊಡುಗೆ ನೀಡಿ ಆರ್ಥಿಕ ಪ್ರಗತಿಗೆ ಬೆನ್ನೆಲುಬಾಗಿದ್ದಾರೆ.
- ಆರ್ಥಿಕ ಪ್ರಗತಿಯಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಜಿಲ್ಲೆಯ ಪ್ರಮುಖ ಮಹಿಳಾ ಉದ್ಯಮಿಗಳ ಜೊತೆಗೆ ಚರ್ಚೆ.
- ಮಹಿಳೆಯರ ಸುರಕ್ಷತೆ ಮತ್ತು ಭದ್ರತೆ ಬಗ್ಗೆ ಹೆಚ್ಚಿನ ಆದ್ಯತೆ.

#### ಸಂಸ್ಕೃತಿ ಹಾಗೂ ಪರಂಪರೆ

- ನಮ್ಮ ನೆಲದ ಕಲೆ, ಸಂಸ್ಕೃತಿ ಮತ್ತು ಪರಂಪರೆಯ ಸಂರಕ್ಷಣೆ ಹಾಗೂ ಪ್ರಚಾರ
- ತುಳುನಾಡು ಹೆರಿಟೇಜ್ ಎಕ್ಸ್‌ಪೀರಿಯನ್ಸ್ ಸೆಂಟರ್ ಸ್ಥಾಪನೆ, ತುಳು ಭಾಷೆಗೆ ಸೂಕ್ತ ಸ್ಥಾನಮಾನ ದೊರೆಕಿಸುವ ದಿಕ್ಕಿನಲ್ಲಿ ವಿಶೇಷ ಪ್ರಯತ್ನ.
- ದೇಯಿ ಬೈದೇತಿ ಹೆಸರಿನಲ್ಲಿ ಸಾಂಪ್ರದಾಯಿಕ ಔಷಧ ಕೇಂದ್ರ ಸ್ಥಾಪನೆ.

#### ಕೃಷಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ

- ಕೃಷಿಕರಿಗೆ ಸುಸ್ಥಿರಾಭಿವೃದ್ಧಿ ಮತ್ತು ತಾಂತ್ರಿಕ ಸಹಕಾರ, ಸಹಜ ಕೃಷಿ ಪದ್ಧತಿ ಬಳಕೆಗೆ ಉತ್ತೇಜನ, ದೇಶಿ ಜಾನುವಾರು ತಳಿಗಳ ರಕ್ಷಣೆ, ಅಡಿಕೆ ಬೆಳೆಗಾರರ ಸಮಸ್ಯೆಗಳನ್ನು ಪರಿಹರಿಸುವ ಪ್ರಾಮಾಣಿಕ ಪ್ರಯತ್ನ.
- ಮೀನುಗಾರಿಕೆ ಕ್ಷೇತ್ರದ ಅಭಿವೃದ್ಧಿಗಾಗಿ ಮೀನುಗಾರಿಕೆ ಕಾಲೇಜನ್ನು ವಿಶ್ವವಿದ್ಯಾಲಯವಾಗಿ ಉನ್ನತೀಕರಿಸುವ ಪ್ರಯತ್ನ.
- ಮತ್ಸ್ಯೋದ್ಯಮದ ಅಭಿವೃದ್ಧಿಯ ಮೂಲಕ ನೀಲಿ ಕ್ರಾಂತಿಗೆ ಕೊಡುಗೆ ನೀಡಲು ಮೀನುಗಾರರಿಗೆ ಪ್ರೋತ್ಸಾಹ.

#### ಯುವಜನತೆ ಮತ್ತು ಸಂವಹನ

- ನಮ್ಮ ಯುವಶಕ್ತಿ ನಮ್ಮ ಅತ್ಯಮೂಲ್ಯ ಸಂಪನ್ಮೂಲ
- ಯುವಕ-ಯುವತಿಯರಿಗೆ ಉದ್ಯೋಗಾವಕಾಶ ಹೆಚ್ಚಿಸಲು ಕೌಶಲ್ಯ ಆಧಾರಿತ ತರಬೇತಿ
- ಯುವಜನತೆಯಲ್ಲಿ ಮಾದಕದ್ರವ್ಯದ ವ್ಯಸನ ಹಾಗೂ ಮಾನಸಿಕ ಆರೋಗ್ಯ ಸಮಸ್ಯಗಳ ನಿವಾರಣೆಗೆ ಪ್ರಯತ್ನ.
- ಕ್ರೀಡಾ ಕ್ಷೇತ್ರದಲ್ಲಿ ಜಾಗತಿಕ ಮಟ್ಟದ ಸಾಧನೆಗೆ ಪೂರಕವಾಗುವಂತಹ ಕ್ರೀಡಾ ಮೂಲಸೌಕರ್ಯ ಹಾಗೂ ವಿಶೇಷ ತರಬೇತಿಗೆ ಆದ್ಯತೆ.
- ರಾಣಿ ಅಬ್ಬಕ್ಕ ಹೆಸರಿನಲ್ಲಿ ಸೈನಿಕ ಶಾಲೆ ಸ್ಥಾಪನೆ.
- Catch-up with Captain: ಕ್ಷೇತ್ರದ ಜನರೊಂದಿಗೆ ನಿರಂತರ ಮುಕ್ತ ಸಂವಾದ

#### ಕರಾವಳಿ ಅಭಿವೃದ್ಧಿ ಮತ್ತು ಭದ್ರತೆ

- ಅಂತರರಾಷ್ಟ್ರೀಯ ವ್ಯಾಪಾರ ಮತ್ತು ವಾಣಿಜ್ಯದ ಪ್ರಗತಿಗೆ ಇರುವ ವಿಫುಲ ಅವಕಾಶಗಳನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ ಕರಾವಳಿ ತೀರದಲ್ಲಿ ಮೂಲಸೌಕರ್ಯ ಅಭಿವೃದ್ಧಿ.
- ಪ್ರಮುಖ ಕರಾವಳಿ ನಗರಗಳ ನಡುವೆ ಜಲಮಾರ್ಗದ ಸಾಧ್ಯತೆಗಳ ಅನ್ವೇಷಣೆ.
- ಭಾರತದ ಮೊದಲ ಕರಾವಳಿ ರಕ್ಷಣಾ ಅಕಾಡೆಮಿಯ ಸಮಯೋಚಿತ ಸ್ಥಾಪನೆ ಹಾಗೂ ಕಾರ್ಯಾರಂಭ.
- ಭಯೋತ್ಪಾದಕ ಚಟುವಟಿಕೆ ನಿಗ್ರಹಿಸುವ ಹಾಗೂ ಜಾಲವನ್ನು ಕಿತ್ತುಹಾಕುವ ಉದ್ದೇಶದೊಂದಿಗೆ ಎನ್‌ಐಎ ಮತ್ತು ವಿಧಿವಿಜ್ಞಾನ ಸಂಶೋಧನಾ ಕೇಂದ್ರ ಸ್ಥಾಪನೆ.

ಮತ್ತೊಮ್ಮೆ ಮೋದಿ ಸರ್ಕಾರ